


# ಮೃತ್ಯೋರ್ಮ ಅಮೃತಂಗಮಯ

■ ಕೇಶವರೆಡ್ಡಿ ಹಂದ್ರಾಳ

ಅಲ್ಲಿಗೆ ತಲುಪುವಷ್ಟರಲ್ಲಿ ಅವಳು ಬಳಲಿ ಬೆಂಡಾಗಿ ಹೋಗಿದ್ದಳು. ಸುತ್ತಲೂ ಎತ್ತರಕ್ಕಿದ್ದ ಕೋಟೆಯಂಥ ಗೋಡೆ. ಮಧ್ಯದಲ್ಲಿ ನ್ಯಾಯಭವನ. ಆ ಭವನವನ್ನು ಸತ್ಯಭವನವೆಂದೂ, ಅಭಯಭವನವೆಂದೂ, ಧರ್ಮಭವನವೆಂದೂ ಕರೆಯುತ್ತಾರೆ. ಆ ಭವನದ ಗೋಪುರದ ಮೇಲೆ ಹಾರಾಡುತ್ತಿದ್ದ ಬಾವುಟ ಮಾತ್ರ ಹೊರಕ್ಕೆ ಕಾಣುತ್ತಿತ್ತು. ಬಾವುಟದ ಮಧ್ಯದಲ್ಲಿ ನ್ಯಾಯದೇವತೆ ನ್ಯಾಯದ ತಕ್ಕಡಿಯಿಡಿದು ಕುಳಿತಿರುವ ಚಿತ್ರ ಗೋಡೆಯ ಹೊರಗೆ ನಿಂತವರಿಗೂ ಕಾಣುತ್ತದೆ. ಕೋಟೆಯಂಥ ಗೋಡೆಗೊಂದು ದೊಡ್ಡ ಬಾಗಿಲು. ಗೋಡೆಯ ಮೇಲೆ ಯಾರೂ ಹತ್ತಬಾರದೆಂದು ಗಾಜಿನ ಚೂರುಗಳನ್ನು ನೆಡಲಾಗಿದೆ. ಬಾಗಿಲಲ್ಲಿ ಸಮವಸ್ತ್ರ ಧರಿಸಿದ ದಪ್ಪ ಮೀಸೆಯ ಕಾವಲುಗಾರ. ಕೈಯಲ್ಲಿ ಕೋಲು, ಸೊಂಟದ ಪಟ್ಟಿಗೆ ಸಿಕ್ಕಿಸಿದ ಉದ್ದನೆಯ ಕತ್ತಿ. ಒಳಹೋಗುವವರನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದಾನೆ. ಹೊರಕ್ಕೆ ಬರುವವರ ತಪಾಸಣೆ ಇಲ್ಲ! ಮುಂಬಾಗಿಲಿನ ಮುಂದೆ ಗಜಿಬಿಜಿಯೋ ಗಜಿಬಿಜಿ. ಕೆಲವರು ಮಾತನಾಡುತ್ತಿದ್ದರೆ, ಕೆಲವರು ಆಲಿಸುತ್ತಿದ್ದರು. ಬ್ಯಾಗುಗಳಿಂದ ಕಾಗದ ಪತ್ರ, ಕಡತಗಳನ್ನು ತೆಗೆದು ಪರಿಶೀಲಿಸುತ್ತಿದ್ದರು ಕೆಲವರು. ಅನತಿ ದೂರದಲ್ಲಿ ನಿಂತ ಪೊಲೀಸ್ ವ್ಯಾನಿನ ಜಾಲರಿಯಲ್ಲಿ ಅಸ್ಪಷ್ಟ ಮುಖಗಳು. ಅಲ್ಲಲ್ಲಿ ನಿಂತ ಕರ್ತವ್ಯನಿರತ ಪೊಲೀಸರು. ಸೂಟು ಬೂಟು ಹಾಕಿದವರು, ಟೈ ಕಟ್ಟಿದವರು ಭರ್ಜರಿ ಭರಾಟೆಯಲ್ಲಿದ್ದರು. ಅವರೊಟ್ಟಿಗೆ ಮಾಸಿದ ಬಟ್ಟೆಯವರು, ಬರಿಗಾಲಿನವರು, ಕೆದರಿದ ಕೂದಲಿನವರೂ ಇದ್ದರು. ಅಲ್ಲೇ ಮಾಸಿದ ಕೆಂಪು ಬಾವುಟ ಹಿಡಿದು ಕುಕ್ಕರಗಾಲಿನಲ್ಲಿ ಕುಳಿತಿದ್ದವನೊಬ್ಬ 'ಕೋಟಿ ಕೋಟಿ ಕದ್ದವರು ಕೋಟುಗಳಲ್ಲಿ, ಕೋಳಿ–ಅನ್ನ ಕದ್ದವರ ಕೈಗಳು ಕೋಳಗಳಲ್ಲಿ. ಅದಿರು ಕದ್ದು ತಿಂದವರು ಅರಮನೆಗಳಲ್ಲಿ, ಬ್ರೆಡ್ಡು ಬನ್ನು ಕದ್ದು ತಿಂದವರು ಸೆರೆಮನೆಗಳಲ್ಲಿ...' ಎಂದು ಆಶುಕವಿಯಂತೆ ಗೊಣಗಿಕೊಳ್ಳುತ್ತಿದ್ದ. ಯಾರೋ ಸಮಾಜಘಾತುಕನಿರಬೇಕು! 'ಶಟಪ್, ಇದು ಡೆಮಾಕ್ರಸಿ. ನೀನೂ ಬೇಕಾದರೆ ಏಣಿ ಹಾಕಿಕೊಂಡು ಆಕಾಶ ಏರಬಹುದು. ಡೆಮಾಕ್ರಸಿ ಈಸ್ ಫಾರ್ ದಿ ಪೀಪಲ್. ಇಲ್ಲಿ ಬೊಗಳುವವರೇ ಜಾಸ್ತಿ...' ಎರಡನೆಯವನು ಮೊದಲನೆಯವನನ್ನು ತರಾಟೆಗೆ ತೆಗೆದುಕೊಂಡು ಬಾಯಿಮುಚ್ಚಿಸಿದ್ದ. ಅರೆ, ಅವರಿಬ್ಬರು ಸ್ನೇಹಿತರೇ! ಅವಳಿಗೆ ಇವ್ಯಾವುದರ ಪರಿವೂ ಇರಲಿಲ್ಲ. ಅವಳು ನ್ಯಾಯದೇವತೆಯನ್ನು ಕಾಣಲೆಂದೇ ಬಂದಿದ್ದಳು.

ಅವಳೀಗ ಬಾಗಿಲಿನ ಬಳಿ ಹೋದಳು. ತಲೆಯ ಮೇಲೆ ಸೆರಗು ಹಾಕಿಕೊಂಡು ಬಾಗಿಲ ಮೂಲಕ ಹೋಗಿ ಬರುವವರನ್ನೇ ನೋಡುತ್ತಿದ್ದಳು. ಹಣೆಯಲ್ಲಿ ಬೆವರಹನಿಗಳು ಸಾಲುಗಟ್ಟಿದ್ದವು. ಅಲ್ಲಿ ಓಡಾಡುವ ಪ್ರತಿಯೊಬ್ಬರ ಮೇಲೂ ಕಾವಲುಗಾರನದು ಹದ್ದಿನಕಣ್ಣು. 'ಯಾರನ್ನು ಹುಡುಕುತ್ತಿರುವೆ ನೀನು?' ಅವಳನ್ನು ದಿಟ್ಟಿಸಿ ಕೇಳಿದ್ದ ಕಾವಲುಗಾರ. 'ನ್ಯಾಯ ದೇವತೆಯನ್ನು ಕಾಣಬೇಕಿತ್ತು ಅಣ್ಣಾ...' ಅವಳು ಬೆಚ್ಚಿಬಿದ್ದು ತಡವರಿಸಿ ಹೇಳಿದ್ದಳು. 'ತಂಗಿ, ನ್ಯಾಯದೇವತೆಯನ್ನು ನೋಡುವುದು ಅಷ್ಟು ಸುಲಭವಲ್ಲ. ಭದ್ರತೆಯ ಕಾರಣದಿಂದಾಗಿ ಆಕೆ ಇಲ್ಲೆಲ್ಲೂ ಓಡಾಡುವುದಿಲ್ಲ. ನ್ಯಾಯದೇವತೆಯನ್ನು